ಪ್ರಬಂಧ

# ಸಂ ಒಳಗಿನ ಉಪಸಂ



**ಚಂದ್ರಕಾಂತ ವಡ್ಡು**

ಕಲೆ: ಗುಜ್ಜಾರ್

ಕೃಶ ಶರೀರದ, ಸರಳ ಪೋಷಾಕಿನ, ಅಮಾಯಕ ಮುಖಭಾವದ ಹುಡುಗ ಮಂಗಳೂರು ಬಳಿಯ ಪುಟ್ಟ ಗ್ರಾಮದಿಂದ ಬೆಂಗಳೂರಿನ ಪತ್ರಿಕಾ ಕಚೇರಿಗೆ ಉಪಸಂಪಾದಕ ಹುದ್ದೆಯ ಸಂದರ್ಶನಕ್ಕೆ ಹಾಜರಾದ. ಆತನ ನಡಿಗೆ, ಕುಳಿತ ಭಂಗಿ ಮತ್ತು ನೋಟದಲ್ಲಿ ಸಂಕೋಚ ಜಿನುಗುತ್ತಿತ್ತು. ಕನ್ನಡಕದೊಳಗೆ ಹೊಳೆವ ಕಣ್ಣುಗಳು, ಕಣ್ಣುಗಳೊಳಗೆ ಮೊಳೆವ ಕನಸುಗಳು. ಕೈಗಿತ್ತ ಕಡತವನ್ನು ಬಿಡಿಸಿದರೆ ಆತ ಮೂಲತಃ ಕವಿ ಮತ್ತು ಚಿತ್ರಕಲಾವಿದ ಎಂಬುದು ಎದ್ದು ಕಾಣುತ್ತಿತ್ತು; ಒಂದು ಕವನ ಸಂಕಲನವೂ ಪ್ರಕಟವಾಗಿತ್ತು. ಹಾದಿ ತಪ್ಪಿ ಪತ್ರಿಕಾರಂಗದ ಅಂಗಳಕ್ಕೆ ಬಂದಂತಿತ್ತು!

ಹಲವು ದಶಕಗಳ ಹಿಂದೆ ಹೀಗೆಯೇ ಸಾಹಿತ್ಯದ ಜಾತ್ರೆಯಲ್ಲಿ ಪೀಪಿ ಊದುತ್ತಾ, ಬೆಂಡುಬತ್ತಾಸು ತಿನ್ನುತ್ತಾ ದಾರಿ ತಪ್ಪಿಸಿಕೊಂಡಿದ್ದ ಸಂಪಾದಕ ಆ ಕ್ಷಣ ಎದುರಿಗಿದ್ದ ಉಪಸಂಪಾದಕ ಅಭ್ಯರ್ಥಿಯಲ್ಲಿ ತನ್ನನ್ನೇ ಹುಡುಕತೊಡಗಿದ. ಸಂ ಒಳಗಿದ್ದ ಉಪಸಂ ಹುಡುಗ ಹೊರಬಂದು, ಪೆನ್ನು ಪೇಪರು ಹಿಡಿದು, 'ಹೇಳಿ, ಬರೆದುಕೊಳ್ಳುವೆ...' ಎನ್ನುವಂತೆ ತನ್ನದುರಿನ ಕುರ್ಚಿಯಲ್ಲಿ ನಸುನಗುತ್ತ ಕುಳಿತ. ಫ್ರಾಂಜ್ ಕಾಫ್ಕಾನ ರೂಪಾಂತರ ಕಾದಂಬರಿಯ ಪಾತ್ರಗಳು ಹೊಸ ಬಗೆಯಲ್ಲಿ ಜೀವತಳೆದ ಸಂದರ್ಭ.

ಹುಡುಗನ ಹೃದಯದಲ್ಲಿ ಕವಿತೆಯ ಕವಾಟಗಳು, ಸಂಪಾದಕನ ದೇಹದೊಳಗೆ ಕಥೆಗಳ ಅಸ್ಥಿಪಂಜರ. ಹುಡುಗನ, ಆತನ ತಂದೆಯ, ಸಹೋದರರ ಹೆಸರು ಕೇಳಿದಂತೆ ಸಂಪಾದಕನ ಬಾಲ್ಯದ ಬದುಕಿಗೆ ಬೆಸೆದುಕೊಂಡ ಮಹಮ್ಮದ್, ಷರೀಫ್, ಅಜೀಜ್, ಅನ್ವರ್, ನಜೀರ್, ಅಬ್ಬಾಸ್, ಇದ್ರಿಸ್ ನೆನಪುಗಳು ಮನದೊಳಗೇ ಕವಾಯತು ನಡೆಸಿದವು. ಎಲ್ಲೋ ಪ್ರೌಢಿಮೆಯ ಪರದೆಯಲ್ಲಿ ಮರೆಯಾಗಿದ್ದ ಬಾಲ್ಯದ ಸಂವೇದನೆಗಳಿಗೆ ಜೀವ ಮರುಕಳಿಸಿದ ಸನ್ನಿವೇಶ.

ಅಮ್ಮನ ತವರಿನಲ್ಲಿ ಅಪ್ಪ ಅಕಾಲಿಕ ಮರಣಕ್ಕೆ ಈಡಾದಾಗ ಸಂ ಆರು ವರ್ಷದ ಬಾಲಕ. ಹಾಗಾಗಿ ಆತನಿಗೆ ಅಪ್ಪ ಅಂದರೆ ಅವರಿವರ ಬಾಯಲ್ಲಿ ಕೇಳಿ ತಿಳಿದ ಅಸ್ಪಷ್ಟ ಆಕೃತಿ. ತಾತನಿಗೆ ಮೂವರು ಹೆಂಡತಿಯರು. ಮೊದಲ ಹೆಂಡತಿಯ ಒಬ್ಬನೇ ಮಗನಾದ ಅಪ್ಪ ನಾಲ್ವರು ತಮ್ಮಂದಿರು, ಒಬ್ಬ ತಂಗಿಯ ಬದುಕು ರೂಪಿಸುವ ಹೊಣೆ ನಿರ್ವಹಿಸಿದ. ಜೊತೆಗೆ ಮಲತಾಯಂದಿರ ಧೋರಣೆಗಳನ್ನು ಧಾರಣೆ ಮಾಡಿಕೊಳ್ಳಬೇಕಿತ್ತು. ಈಗಲೂ ಊರಿನ ಹಳಬರು ಅಪ್ಪನ ಖಡಕ್ ಸ್ವಭಾವ, ಸಿಟ್ಟು, ನ್ಯಾಯ ನಿಷ್ಠುರತೆ ಇತ್ಯಾದಿ ನೆನೆಯುವುದನ್ನು ಕಂಡಾಗ ಅಚ್ಚರಿಯಾಗುತ್ತದೆ. ಅಪ್ಪನನ್ನು ಕಳೆದುಕೊಂಡ ನಂತರ ಮೊದಲ ಬಾರಿಗೆ ಸಂ, ಸ್ವಗ್ರಾಮಕ್ಕೆ ಹೋದಾಗ ಊರಿನ ಜೋಗಪ್ಪ ತನ್ನನ್ನು ಅಪ್ಪಿಕೊಂಡು, ಅಪ್ಪನನ್ನು ನೆನೆದು, 'ಖಂಡಿತವಾದಿ ಲೋಕವಿರೋಧಿ' ಎಂದು ಹೇಳಿದ ದನಿ ಸಂ ಕಿವಿಯಲ್ಲಿ ಈಗಲೂ ಮಾರ್ದನಿಸುತ್ತದೆ.